(ಇಂದು ದಿನಾಂಕಃ **08-07-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲು ಶ್ರೀ ವಿ ಪಿ ಪಿ ವಕೀಲರಿಂದಃ**

ನಾನು ಸವದತ್ತಿ ತಾಲ್ಲೂಕಿನ ಚುಲಕಿ ಗ್ರಾಮದಲ್ಲಿ ವಾಸವಿರುತ್ತೇನೆ. ಸದರಿ ಗ್ರಾಮದಲ್ಲಿ ನಾನು, ನನ್ನ ಗಂಡ ಹಾಗೂ ನನ್ನ ಮಾವ ವಾಸವಿರುತ್ತೇವೆ. ಸದರಿ ಗ್ರಾಮದಲ್ಲಿ ನಮಗೆ ಮನೆ ಮಾತ್ರ ಇದ್ದು, ಜಮೀನು ಇರುವುದಿಲ್ಲ. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನನ್ನ ತಂದೆ ಮೃತಪಟ್ಟು 15 ವರ್ಷ ಆಗಿರುತ್ತದೆ. ನನ್ನ ತಂದೆ 2007 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮೃತಪಟ್ಟು 10-11 ವರ್ಷವಾಗಿರುತ್ತದೆ. ನಾನು ಜಮೀನು ಹಾಗೂ ಮನೆಗೆ ಸಂಬಂಧಿಸಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಗಳು ಕಟ್ಟಿಗೆ ರವರ ಮನೆತನದವರಿಗೆ ಸಂಬಂಧಿಸಿದ್ದಾಗಿವೆ. ದಾವಾ ಆಸ್ತಿಗಳ ಸಂಖ್ಯೆ ಹೇಳಲಾಗುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರಿನಲ್ಲಿ ಆಸ್ತಿಗಳು ಇದ್ದ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆ ತಾಯಿ ಜೀವಂತವಿದ್ದಾಗ ಸದರಿಯವರು 6 ನೇ ವಾದಿ ಭೀಮಪ್ಪ ರವರೊಂದಿಗೆ ವಾಸವಿದ್ದರು ಎಂದರೆ ಸರಿ. ಸರ್ವೇ ನಂಃ 121/1 ಕ್ಷೇತ್ರ 4 ಎಕರೆ 39 ಗುಂಟೆ ಜಮೀನನ್ನು ಸದರಿ 3 ಜನ ಸಾಗುವಳಿ ಮಾಡುತ್ತಿದ್ದರು ಹಾಗೂ ಅದರ ಆದಾಯ ಅವರೇ ಪಡೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗ 1 ಮತ್ತು 2 ನೇ ಪ್ರತಿವಾದಿಯರು ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿ. ಸದರಿಯವರು ಕುರಿ ಕಾಯುವುದು ಹಾಗೂ ಬೇರೆಯವರ ಜಮೀನನ್ನು ಲಾವಣಿಗೆ ತೆಗೆದುಕೊಂಡು ಜೀವನ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಜೀವಂತವಿದ್ದಾಗ ನಾನು ಹೆಬ್ಬಾಳ ಗ್ರಾಮಕ್ಕೆ ಬಂದಿರುತ್ತೇನೆ. 1 ನೇ ಪ್ರತಿವಾದಿ ತನ್ನ ಉದ್ಯೋಗದಿಂದ ಬಂದ ಆದಾಯಗಳಿಂದ ದಾವಾ ಶೆಡ್ಯೂಲ್ ಬಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ದಿನಾಂಕಃ 17-07-2008 ರಂದು 1 ನೇ ಪ್ರತಿವಾದಿ ಜಮೀನು ಸರ್ವೇ ನಂಃ 544/1 ನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಹನಮಂತ ಕುಲಕರ್ಣಿ ರವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕಃ 25-04-1988 ರಂದು 1 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಜಮೀನು ಸರ್ವೇ ನಂಃ 554/2 ಕ್ಷೇತ್ರ 3 ಎಕರೆ ಜಮೀನನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಹನಮಂತ ಕುಲಕರ್ಣಿ ರವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿಯವರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ.

4. ದಿನಾಂಕಃ 16-07-2002 ರಂದು 1 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಜಮೀನು ಸರ್ವೇ ನಂಃ 554/4 ಕ್ಷೇತ್ರ 2 ಎಕರೆ ಜಮೀನನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಮುಗುಳಿ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ದಿನಾಂಕಃ 23-04-2004 ರಂದು 1 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಜಮೀನು ಸರ್ವೇ ನಂಃ 578/1 ಕೆ ಕ್ಷೇತ್ರ 4 ಎಕರೆ ಜಮೀನನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಬಸವ್ವ ಮಾಳಪ್ಪ ಮಾಳನ್ನವರ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ನಾನು ಸದರಿ ಖರೀದಿ ಪತ್ರಗಳನ್ನು ನೋಡಿರುವುದಿಲ್ಲ. ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ದಿನಾಂಕಃ 20-05-2002 ರಂದು 2 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಜಮೀನು ಸರ್ವೇ ನಂಃ 49/2 ರಲ್ಲಿ ನಿವೇಶನ ಸಂಃ 50 ನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಆದಪ್ಪ ಬಸಪ್ಪ ಜಟ್ಟೆನ್ನವರ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ಪತ್ರದ ಪ್ರಕಾರ ಸದರಿಯವರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿದ್ದಾಗ ಖರೀದಿಯಾಗಿರುತ್ತದೆ ಎಂದು ನುಡಿದಿರುತ್ತಾರೆ.

5. 2 ನೇ ಪ್ರತಿವಾದಿ ನಿವೇಶನ ಸಂಃ 50 ನ್ನು 3 ನೇ ಪ್ರತಿವಾದಿಗೆ ನೋಂದಾಯಿತ ಹಕ್ಕು ಬಿಟ್ಟ ಪತ್ರದ ಮುಖಾಂತರ ವರ್ಗಾವಣೆ ಮಾಡಿರುತ್ತಾನೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು ನನ್ನ ಮಗಳಿಗೆ ಸದರಿಯವನು ಯಾವುದೇ ಆಸ್ತಿಯನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮಗಳನ್ನು 2 ನೇ ಪ್ರತಿವಾದಿ ವಿವಾಹ ಮಾಡಿಕೊಂಡಿರುತ್ತಾನೆ ಎಂದು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ. ನನ್ನ ಮಗಳು 2 ನೇ ಪ್ರತಿವಾದಿ ತನ್ನ ಗಂಡ ಎಂದು

ತೋರಿಸಲು ದೂರನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಮಗಳನ್ನು 2 ನೇ ಪ್ರತಿವಾದಿಗೆ ವಿವಾಹ ಮಾಡಿ ಕೊಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಮಗಳು 2 ನೇ ಪ್ರತಿವಾದಿಯ ಮೊದಲನೆಯ ಹೆಂಡತಿ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆಸ್ತಿ ಸಂಃ 327/ಎ ಆಸ್ತಿ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನಾನು ಸದರಿ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಯಾವ ರೀತಿ ಬಂತು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. 1 ನೇ ವಾದಿ ನನ್ನ ಅಕ್ಕ. ನನ್ನ ತಂದೆ ಜೀವಂತವಿದ್ದಾಗ 1 ನೇ ವಾದಿಯ ಹೆಸರಿನಲ್ಲಿ ವಿ ಪಿ ಸಿ ಸಂಃ 538 ನಿವೇಶನ ಸಂಃ 24 ಕ್ಷೇತ್ರ 1 ಗುಂಟೆ 7 ಆಣೆ ನಿವೇಶನವನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸಾಕ್ಷಿಯು 1 ನೇ ವಾದಿ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ವಿಷಯಕ್ಕೆ ಸಂಬಂಧಿಸಿ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ ಆಸ್ತಿ ನಮ್ಮ ಕುಟುಂಬದ ಆಸ್ತಿಯಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಆಸ್ತಿ ಸರ್ವೇ ನಂಃ 49/2 ರಲ್ಲಿ ನಿವೇಶನ ಸಂಃ 36 ಹಾಗೂ 51 ಗಳನ್ನು 6 ನೇ ವಾದಿ ಭೀಮಪ್ಪ ರವರ ಹೆಸರಿನಲ್ಲಿ ನನ್ನ ತಂದೆ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳನ್ನು ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಶೆಡ್ಯೂಲ್ ಎ ಆಸ್ತಿ 4 ಎಕರೆ 39 ಗುಂಟೆ ಹಾಗೂ ಶೆಡ್ಯೂಲ್ ಸಿ ನ ವಿ ಪಿ ಸಿ ಸಂಃ 327/ಎ ಗಳು ಮಾತ್ರ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಇದ್ದಾಗ ಖರೀದಿಸಿದ ಆಸ್ತಿಗಳಾಗಿರುತ್ತವೆ ಎಂದು ನುಡಿದಿರುತ್ತಾರೆ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**O. S. No:68/2019**
**PW: 1**

**ನವಲಗುಂದ.**